ನಿಯತ್ತಾಗಿ ಐದುಗಂಟೆಗೇ ಎದ್ದು ಹೂ ಮಾರ್ಕೆಟ್ಟಿಗೆ ಹೋಗುವ ಮಾದೇವಿ ಅಲ್ಲಿ ಉದುರಾಡಿರುತ್ತಿದ್ದ ಹೂವುಗಳನ್ನ ಚೆಂದಕೆ ಆಯ್ದು ನೀರು ಚಿಮುಕಿಸಿ ತಾಜಾಗೊಳಿಸಿ ಬುಟ್ಟಿ ತುಂಬಿಕೊಂಡು, ಒಂದಿಷ್ಟು ಪುಡಿಗಾಸಲ್ಲಿ ಮತ್ತೊಂದಿಷ್ಟು ತಾಜಾ ಹೂವುಗಳನ್ನು ಕೊಂಡು ತರುವಷ್ಟರಲ್ಲಿ ಆರುವರೆಯಾಗಿರುತ್ತಿತ್ತು. ನಂತರ ದಡಬಡನೆ ಮಗನಿಗೆ ಚಾ ಕಾಸಿ, ರೊಟ್ಟಿ ತಟ್ಟಿಟ್ಟು, "ಮಾದಾ ರೊಟ್ಟಿ ತಿನ್ಕಂಡು ನೆಟ್ಗೆ ಇಸ್ಕೂಲಿಗೆ ನಡೀ..." ಎಂದು ಎಚ್ಚರಿಸಿದವಳೇ ಹೂ ಬುಟ್ಟಿ ಹಿಡಿದು ಹೊರಡುತ್ತಿದ್ದಳು. "ಮೊಲ್ಲೆ ಹೂವ..'' ಎಂದು ಹೊಕ್ಕುಳ ಬುಡದಿಂದ ಸ್ವರ ಹೊರಡಿಸಿ ಕೂಗುತ್ತ ಹೊರಟರೆ, ಆದಿತ್ಯ ನಗರದ ಬೀದಿ ಬೀದಿಗಳ ಸಾಲು ಮನೆಗಳ ನಡುವೆ ಖಾಲಿ ಇರುವ ಸೈಟಲ್ಲಿ ಅಲ್ಲಲ್ಲಿ ಪ್ಲಾಸ್ಟಿಕ್ ಹೊದೆಸಿ ಗುಡಿಸಲು ಹಾಕಿಕೊಂಡು ಬಿಡಾರ ಹೂಡಿದ ಗುಳೆ ಬಂದಿದ್ದ ಗಾರೆ ಕಾರ್ಮಿಕ ಕುಟುಂಬಗಳ ಹೆಂಗಸರೇ ಅವಳ ಗ್ರಾಹಕರು. ಅದರಲ್ಲೂ ಶುಕ್ರವಾರ, ಮಂಗಳವಾರ ವ್ಯಾಪಾರ ಗ್ಯಾರಂಟಿ. ಟೆಂಟೊಳಗಿನ ದೇವರ ಗೂಡುಗಳಲ್ಲಿರುವ ಅವರವರ ಊರುಗಳ ಗ್ರಾಮದೇವತೆಯದ್ದೋ ಕುಲದೇವತೆಯದ್ದೊ ಚಿತ್ರಪಟಕ್ಕೆ ಊದಿನ ಕಡ್ಡಿ ಹಚ್ಚಿ, ಹೂ ಏರಿಸಿ ಇದ್ದುದರಲ್ಲೆ ಒಬ್ಬಟ್ಟು ಮಾಡಿ ಊರ ಭಕ್ತಿಯನ್ನು, ಸಂಪ್ರದಾಯವನ್ನೂ ನಿಭಾಯಿಸಿ ದೇವ ದೇವತೆಗಳನ್ನು ಶಾಂತವಾಗಿರಿಸಿಕೊಳ್ಳುತ್ತಿದ್ದ ಹೆಂಗಸರು ಮಾದೇವಿ ತರುವ ಅಗ್ಗದ ಮೊಲ್ಲೆ ಹೂವಿಗಾಗೇ ಕಾಯುತ್ತಿದ್ದರು. ಆ ಹೆಂಗಸರು ಕೊಡುವ ರೂಪಾಯಿಗಳೆಲ್ಲ ಸೇರಿ ಆಗುವ ಒಟ್ಟು ಚಿಲ್ಲರೆ ಕಾಸಲ್ಲಿ ಆಕೆ ತಾಜಾ ಹೂ ಕೊಳ್ಳುತ್ತಿದ್ದುದು. ಆ ಹೂವುಗಳನ್ನ ಬೇರೆಯಾಗಿಯೇ ಎತ್ತಿಟ್ಟು ದೇವಸ್ಥಾನದ ಬೀದಿಯಲ್ಲಿ ಮಾರುತ್ತಿದ್ದಳು. ಹತ್ತು ಗಂಟೆಗೆಲ್ಲ ಅವಳ ಬೆಳಗಿನ ವಯಿವಾಟು ಮುಗಿಯುತ್ತಿತ್ತು. ಕೈಗೆ ಬಿದ್ದ ಕಾಸಲ್ಲಿ ಅಂದಿಗೆ ಬೇಕಾದ ಕಡಲೆಹಿಟ್ಟು, ಉಳ್ಳಾಗಡ್ಡಿ ಖರೀದಿ ಮಾಡಿ ಶೆಡ್ಡಿಗೆ ಬಂದವಳು ನಾಷ್ಟಾ ಮುಗಿಸಿ, ಬಟ್ಟೆ, ಪಾತ್ರೆ ತೊಳೆದು, ಸುಮಾರು ಒಂದು ಕಿ.ಮೀ ದೂರದ ಮುನೇಶ್ವರ ಲೇ ಔಟಿನ ತುದಿಯಲ್ಲಿರುವ ವೃದ್ಧಾಶ್ರಮಕ್ಕೆ ಹೋಗಿ ಅಲ್ಲಿ ನೆಲ ಒಳಿದು ಬರುವಳು. ಸ್ನಾನ ಮಾಡಿ ಅರೆತಾಸು ವಿಶ್ರಾಂತಿ ಪಡೆದವಳು ಮತ್ತೆ ನಾಲ್ಕು ಗಂಟೆಗೆ ಕೈಗಾಡಿಯಲ್ಲಿ ಒಂದು ಸ್ಟೌ, ಎಣ್ಣೆ ಬಾಂಡಲಿ, ಕಲೆಸಿಟ್ಟ ಕಡಲೆ ಹಿಟ್ಟಿನ ಕಡಾಯಿ, ಕೊಚ್ಚಿದ ಉಳ್ಳಾಗಡ್ಡಿ ಇಟ್ಟುಕೊಂಡು ಫುಟ್‌ಪಾತಿಗೆ ನಡೆದಳೆಂದರೆ ಅವಳ ವ್ಯಾಪಾರ ಸುರು. ಅವಳು ಈ ಮುಂಚೆ ಗಾಡಿ ಇಡುತ್ತಿದ್ದುದು ಒಂದು ಅನಾಥಾಶ್ರಮದ ಶಾಲೆಯ ಕಂಪೌಂಡಿನ ಸಮೀಪವಾಗಿತ್ತು. ಆದರೆ, ಭಜಿ ಪರಿಮಳ ಕಂಪೌಂಡ್ ಒಳಗೆ ಬಂದು ಹುಡುಗರ ಮನಸ್ಸೆಲ್ಲ ಕೆಟ್ಟು ಹೋಗುತ್ತಿದೆಯೆಂದು ಶಾಲೆಯವರು ಅವಳನ್ನ ಅಲ್ಲಿಂದ ಎತ್ತಂಗಡಿ ಮಾಡಿಸಿದ್ದರು. ತನ್ನ ಕೈಗಾಡಿ ಜಾಗ ಬದಲಿಸುವುದು ಅವಳಿಗೆ ಹೊಸದಲ್ಲವಾದ್ದರಿಂದ ಅಲ್ಲಿಂದ ಇನ್ನೊಂದು ತಿರುವಿನ ಫುಟ್‌ಪಾತಲ್ಲಿ ವ್ಯಾಪಾರ ಸುರು ಮಾಡಿಕೊಂಡಿದ್ದಳು. ಅವಳ ಅದೃಷ್ಟಕ್ಕೆಂಬಂತೆ ಇಲ್ಲಿ ವ್ಯಾಪಾರ ಜಾಸ್ತಿಯೇ ಆಗಲಾರಂಭಿಸಿತ್ತು. ಉಳ್ಳಾಗಡ್ಡಿ ಭಜಿ ಕೊತಕೊತ ಕುದಿಯುತ್ತಿರುವ ಎಣ್ಣೆ ಬಾಂಡಲಿಯಿಂದ ತನ್ನ ಘಮ ಹರಡಲು ಸುರು ಮಾಡುತ್ತಿದ್ದಂತೆ ಜನ ಬಂದು ನಿಲ್ಲುತ್ತಿದ್ದರು. ಕೊಂಡೊಯ್ದಷ್ಟು ಸಾಮಾನು ಖಾಲಿಯಾಗುತ್ತಿದ್ದಂತೆ ಒಂದು ಮುಷ್ಟಿ ಭಜಿ ಮಗನಿಗೆತ್ತಿಟ್ಟುಕೊಂಡು ಗಾಡಿ ತಳ್ಳಿಕೊಂಡು ಶೆಡ್ಡಿನತ್ತ ಮರಳಿ ಹೊರಟಳೆಂದರೆ ಅವಳ ಅಂದಿನ ದುಡಿಮೆ ಮುಗಿಯುತ್ತಿತ್ತು. ಇದು ಮಾದೇಶನ ಅಪ್ಪ ತಿಪ್ಪೇಶ ಬದುಕಿದ್ದಾಗಲೂ ನಡೆಯುತ್ತಿದ್ದ ದಿನಚರಿಯಾಗಿತ್ತಾದರೂ ಆತ ಗಾರೆ ಕೆಲಸ ಮುಗಿಸಿ ಹೆಂಡ ಸುರಿದುಕೊಂಡು ಬಂದು ಇವಳು ತಂದಿಟ್ಟ ಭಜಿ ತಿನ್ನುತ್ತ, "ಈ ಭಜಿಗಾಡಿ ಯಾಪಾರ ಮಾಡೋದು ಬಿಟ್ಟು ನನ್ನೊಂದಿಗೆ ಗಾರೆ ಕೆಲಸಕ್ಕೆ ಬಂದರೆ ಯಲ್ಲಾರೆಡ್ಡಿ ಇದಕ್ಕಿಂತ ಜಾಸ್ತಿ ಸಂಬಳ ಕೊಡ್ತಾನೆ" ಎಂದು ಕ್ಯಾತೆ ಸುರು ಮಾಡುತ್ತಿದ್ದ. ಅವನ ಗುರಿ ಇರುತ್ತಿದ್ದುದು ಅವಳ ಕಾಸಿನ ಡಬ್ಬಿ ಮೇಲೆ. ಮಾದೇವಿ ವಿರೋಧಿಸಿದಾಗ ಸುರುವಾಗುತ್ತಿತ್ತು ಅವನ ಗಂಡಸ್ತನದ ಬೈಗುಳ ಒದೆತ–ಹೊಡೆತ.